# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : **547(822)**
ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 26.12.2022
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸಾರ್ವಜನಿಕ ಶಿಕ್ಷಣ ಇಲಾಖೆಯ ಎಸ್.ಎಸ್.ಎಲ್.ಸಿ ಮೌಲ್ಯ ಮಾಪನದ ನಂತರ ದೋಷಪೂರಿತ ಮೌಲ್ಯ ಮಾಪನಕ್ಕೆ ದಂಡ ವಿಧಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ದಂಡ ವಿಧಿಸಲು ಸರ್ಕಾರದ ಯಾವ ನಿಯಮಗಳಲ್ಲಿ ಅವಕಾಶವಿದೆ; | ಹೌದು. 1966ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ ಅಧ್ಯಾಯ 05, ಅನೆಕ್ಷರ್ 03 (Rules of the schemes of the Karnataka SSLC Examination) ರ ನಿಯಮ 24ರ ಅನುಸಾರ ದಂಡ ವಿಧಿಸಲು ಅವಕಾಶವಿರುತ್ತದೆ. ಈ ನಿಯಮದ ಅನುಸಾರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 162, 192 ಮತ್ತು 194 ನೇ ಸಭೆಯ ನಡವಳಿಯಂತೆ ದಂಡ ವಿಧಿಸಲು ಕ್ರಮ ವಹಿಸಲಾಗುತ್ತಿದೆ.<br><br>ಮಕ್ಕಳಿಗೆ ನೀಡುವ ಅಂಕಗಳನ್ನು ಜಾಗರೂಕತೆಯಿಂದ ಯಾವುದೇ ದೋಷವಿಲ್ಲದೇ ನಿರ್ವಹಿಸಲು ಈ ರೀತಿಯ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿರುವುದರಿಂದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ರೀತಿ ದಂಡ ಪ್ರಕ್ರಿಯೆಯನ್ನು ಜಾರಿಗೊಳಿಸಲಾಗಿದೆ.<br><br>ಮೌಲ್ಯಮಾಪನ ಕಾರ್ಯ ನಡೆಸುವ ಪೂರ್ವದಲ್ಲಿ, ಮೌಲ್ಯಮಾಪನ ಕೇಂದ್ರಗಳ ಜಂಟಿ ಮುಖ್ಯ ಮೌಲ್ಯಮಾಪಕರೊಂದಿಗೆ (JCE) ಮೌಲ್ಯಮಾಪನ ಕುರಿತು ವೀಡಿಯೋ ಸಂವಾದವನ್ನು ನಡೆಸಲಾಗುತ್ತದೆ. ನಂತರ ಜಂಟಿ ಮುಖ್ಯ ಮೌಲ್ಯಮಾಪಕರುಗಳಿಂದ ಉಪಮುಖ್ಯ ಮೌಲ್ಯಮಾಪಕರುಗಳಿಗೆ (DCE) ಮೌಲ್ಯಮಾಪನದ ಕುರಿತು ತರಬೇತಿಯನ್ನು ನೀಡಲಾಗುತ್ತದೆ.<br><br>ಜಂಟಿ ಮುಖ್ಯ ಮೌಲ್ಯಮಾಪಕರು (JCE), ಉಪಮುಖ್ಯ ಮೌಲ್ಯಮಾಪಕರು(DCE) ಹಾಗೂ ಸಹಾಯಕ ಮೌಲ್ಯಮಾಪಕರು (AE)ಗಳು ಮೌಲ್ಯಮಾಪನ ಕೇಂದ್ರಗಳಲ್ಲಿ ಅನುಸರಿಸಬೇಕಾದ ಕಾರ್ಯಗಳ ಕುರಿತು |

| | | |
|---|---|---|
| | | ಸುತ್ತೋಲೆಯನ್ನು ಕಾಲಕಾಲಕ್ಕೆ ಹೊರಡಿಸಲಾಗುತ್ತದೆ. |
| ಆ | ಎಸ್.ಎಸ್.ಎಲ್.ಸಿ ಮೌಲ್ಯ ಮಾಪನದ ನಂತರ ದೋಷಪೂರಿತ ಮೌಲ್ಯ ಮಾಪನಕ್ಕೆ ವಿಧಿಸಲಾಗುತ್ತಿರುವ ದಂಡವನ್ನು ತಡೆಹಿಡಿದು ಶಿಕ್ಷಕರಿಗೆ ಈ ಬಗ್ಗೆ ಸಲಹೆಗಳನ್ನು ನೀಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? | ಮರು ಮೌಲ್ಯಮಾಪನ ಕೈಗೊಂಡಾಗ 05 ಕ್ಕಿಂತ ಹೆಚ್ಚು ಅಂಕ ವ್ಯತ್ಯಾಸವಾದ ಪ್ರಕರಣಗಳಲ್ಲಿ ದಂಡ ವಿಧಿಸಲು ಅವಕಾಶವಿರುತ್ತದೆ. (01 ರಿಂದ 05 ಅಂಕಗಳ ವ್ಯತ್ಯಾಸ ಇದ್ದಲ್ಲಿ ದಂಡ ವಿಧಿಸಲು ಅವಕಾಶವಿರುವುದಿಲ್ಲ.)<br><br>ಮೌಲ್ಯಮಾಪನ ಕಾರ್ಯ ನಡೆಸುವ ಪೂರ್ವದಲ್ಲಿ, ಮೌಲ್ಯಮಾಪನ ಕೇಂದ್ರಗಳ ಜಂಟಿ ಮುಖ್ಯ ಮೌಲ್ಯಮಾಪಕರೊಂದಿಗೆ (JCE) ಮೌಲ್ಯಮಾಪನ ಕುರಿತು ವೀಡಿಯೋ ಸಂವಾದವನ್ನು ನಡೆಸಲಾಗುತ್ತದೆ. ನಂತರ ಜಂಟಿ ಮುಖ್ಯ ಮೌಲ್ಯಮಾಪಕರುಗಳಿಂದ ಉಪಮುಖ್ಯ ಮೌಲ್ಯಮಾಪಕರುಗಳಿಗೆ (DCE) ಮೌಲ್ಯಮಾಪನದ ಕುರಿತು ತರಬೇತಿಯನ್ನು ನೀಡಲಾಗುತ್ತದೆ.<br><br>ಜಂಟಿ ಮುಖ್ಯ ಮೌಲ್ಯಮಾಪಕರು (JCE), ಉಪಮುಖ್ಯ ಮೌಲ್ಯಮಾಪಕರು(DCE) ಹಾಗೂ ಸಹಾಯಕ ಮೌಲ್ಯಮಾಪಕರು (AE)ಗಳು ಮೌಲ್ಯಮಾಪನ ಕೇಂದ್ರಗಳಲ್ಲಿ ಅನುಸರಿಸಬೇಕಾದ ಕಾರ್ಯಗಳ ಕುರಿತು ಸುತ್ತೋಲೆಯನ್ನು ಕಾಲಕಾಲಕ್ಕೆ ಹೊರಡಿಸಲಾಗುತ್ತದೆ. |

ಸಂಖ್ಯೆ:ಇಪಿ 285 ಎಸ್ ಎಲ್ ಬಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ
ಸಚಿವರು